ಥತ್... ಈ ಸಿಸಿಟೀವಿಗಳ ಮಿತಿ ಇಷ್ಟೇ. ಸುಳಿವು ಸಿಕ್ಕಿ ಇನ್ನೇನು ಎಲ್ಲಾ ಗೊತ್ತಾಯಿತು ಅನ್ನುವಷ್ಟರಲ್ಲಿ ದ್ವಂದ್ವವನ್ನು ಮೂಡಿಸಿ ಬಟಾಬಯಲಲ್ಲಿ ನಿಲ್ಲಿಸಿಬಿಡುತ್ತವೆ.

ಇನ್ನೊಂದು ಅಚ್ಚರಿಯೆಂದರೆ ಕೂಸೂ ಸಹಾ ತೀರ ಅಳುವುದಾಗಲೀ ರಚ್ಚೆ ಹಿಡಿಯುವುದಾಗಲೀ ಕಾಣಲಿಲ್ಲ. ಸಾಮಾನ್ಯವಾಗಿ ಹೊಸಬರು ಎತ್ತಿಕೊಂಡಾಗ ಮಕ್ಕಳು ಹಿಂಜರಿಯುತ್ತವೆ. ಹತ್ತಿರ ಹೋಗಲು ಅಳುತ್ತವೆ. ಅಂತದೇನೂ ಇಲ್ಲಿ ಕಾಣಲಿಲ್ಲ! ಬಹುಶಃ ಯಾರಾದರೂ ಪರಿಚಿತರು...

ಎಲ್ಲ ದೃಶ್ಯಾವಳಿಗಳನ್ನು ಪೆನ್‌ಡ್ರೈವ್‌ನಲ್ಲಿ ಹಾಕಿಕೊಂಡೆ. ಯಾರಿಗೆ ತೋರಿಸಿ ಗುರುತು ಹಿಡಿಯೋದು? ಹುಡುಗ ಮತ್ತು ಮಹಿಳೆ ಸೇರಿ ಮಗುವನ್ನು ಎತ್ತಿಕೊಂಡು ಹೋಗಿದ್ದಾರೆ ಅಂತಾಯ್ತು. ಇವಳೇ ಅಂತ ಗುರುತು ಹಿಡಿಯುವಷ್ಟು ಸ್ಪಷ್ಟವಾಗಿ ಆಕೆಯ ಮುಖ ಎಲ್ಲೂ ಬಂದಿಲ್ಲ. ಅಪಹರಣ ಬಹುಶಃ ದುಡ್ಡಿಗಿರಲಾರದು. ಅಸ್ಗರ್‌ನಂತಹವನನ್ನು ತಲೆಕೆಳಗು ಮಾಡಿದರೂ ಚಿಲ್ಲರೆ ಹಣ ಉದುರಲ್ಲ. ಮತ್ತೇನಿರಬಹುದು... ವೈಯುಕ್ತಿಕ ದ್ವೇಷ?... ಹಾಗಿದ್ರೆ ಪರಸ್ಪರ ಗುದ್ದಾಡಿಕೊಳ್ಳುತ್ತಿದ್ದರು. ಮಚ್ಚು ಲಾಂಗು ಹಿಡಿದು ಕಾಳಗ ಮಾಡುತ್ತಿದ್ದರು. ಅಪಹರಣ, ಅದೂ ಮಗುವನ್ನ... ಸಾಧ್ಯವಿಲ್ಲ. ಘಟನೆಗೆ ಇದ್ದಿರಬಹುದಾದ ಇನ್ನಿತರ ಯಾಂಗಲ್ಲುಗಳನ್ನು ತಡಕತೊಡಗಿದೆ.

ಮಾರನೇ ದಿನ ಪತ್ರಿಕೆಯಲ್ಲಿ ಅಪಹರಣದ ವಿಷಯ ಬಂದಿತ್ತು. ಹುಡುಗ ಮಗುವನ್ನು ಎತ್ತಿಕೊಂಡು ಹೋಗುತ್ತಿರುವ ಫೋಟೋವನ್ನು ಯಾರೋ ಪೇಪರಿನವರಿಗೆ ಕೊಟ್ಟು ಪುಣ್ಯ ಕಟ್ಟಿಕೊಂಡಿದ್ದರು. ಕೂಸಿಗೆ ಅಪಾಯ ಉಂಟಾಗದಂತೆ ಪ್ರಕರಣವನ್ನು ಸುಖಾಂತ್ಯವಾಗಿಸುವುದು ನಮ್ಮ ಆದ್ಯತೆಯಾಗಿತ್ತು. ಹೆಚ್ಚುತ್ತಿರುವ ಪಬ್ಲಿಸಿಟಿಯಿಂದ ತನಿಖೆಗೆ ಹಿನ್ನಡೆಯಾಗಬಹುದಿತ್ತು. ವಿಷಯ ಸೂಕ್ಷ್ಮವಿದ್ದು ಹೆಚ್ಚು ಕಡಿಮೆಯಾದರೆ ಅತಿರೇಕಕ್ಕೂ ಹೋಗಬಹುದಿತ್ತು.

ಸ್ವಲ್ಪ ಹೊತ್ತು ಯೋಚಿಸಿದವನು ನಿರ್ಧಾರವೊಂದಕ್ಕೆ ಬಂದೆ. ಅಸ್ಗರನನ್ನು ಠಾಣೆಗೆ ಕರೆಸಿದವನು ನನ್ನ ಮೊಬೈಲಿನಲ್ಲಿ ಹಾಕಿಕೊಂಡಿದ್ದ ವಿಡಿಯೋಗಳನ್ನು ಅವನಿಗೆ ತೋರಿಸಿದೆ.

'ದೇಖೋ ಅಸ್ಗರ್... ಇದು ಬರೀ ಹುಡುಗನ ಕೆಲಸ ಅಲ್ಲ, ಹೆಂಗಸೊಬ್ಬಳು ಜತೆಗಿದ್ದಾಳೆ. ಬುರ್ಖಾ ಹಾಕಿರೋದ್ರಿಂದ ನಿನ್ಗೆ ಅಥವಾ ನಿನ್ನ ಕುಟುಂಬಕ್ಕೆ ಪರಿಚಯದವಳಿರಬಹುದು. ಅದಕ್ಕೇ ನಿನಗೆ ತೋರಿಸ್ತಾ ಇದೀನಿ. ಎಲ್ರಿಗೂ ತೋರ್ಸೋಕಾಗಲ್ಲ. ಟೀವಿ ಪೇಪರಿನವರ ಕೈಗೆ ಸಿಕ್ರೆ ಪರಿಸ್ಥಿತಿ ಹದಗೆಡುತ್ತೆ. ಒಮ್ಮೆ ಅಲ್ಲ ಹತ್ತು ಸಾರಿ ನೋಡು... ಆ ಹೆಂಗಸು ಯಾರು ಗೊತ್ತಾಗ್ತದ?' ಕೇಳಿದೆ.

ಅಸ್ಗರ್ ಮೊಬೈಲ್ ಇಸಿದುಕೊಂಡ. ತಿರುತಿರುಗಿ ನೋಡುತ್ತಾ ಹೋದ. ಅರ್ಧಗಂಟೆಯವರೆಗೂ ನೋಡಿದ. ಜೊತೆಯಲ್ಲಿದ್ದವರಿಗೂ ತೋರಿದ. ಕೊನೆಗೆ 'ಸಾ... ಇದನ್ನು ನನ್ ಮೊಬೈಲಿಗೆ ಆಕ್ಕಂತೀನಿ... ಏರಿಯಾದಾಗೆ ಯಾರ್ಗಾದ್ರೂ ತೋರಿಸಿದ್ರೆ ಏನಾರಾ ಗೊತ್ತಾಯ್ತದೆ...' ಅಂದ. ಹೌಹಾರಿದೆ!

'ಅದೇ ಬ್ಯಾಡಾ ಅನ್ನೋದು... ಇದು ಯಾರ ಕೈಗೂ ಸೇರಬಾರದು' ಖಚಿತ ದನಿಯಲ್ಲಿ ಹೇಳಿದೆ.

'ಮತ್ತೆ ಪತ್ತೆಯಾಗೋದು ಹೆಂಗೆ ಸಾ?...' ಮುಖ ಕಿವುಚುತ್ತಾ ತಲೆ ತುರಿಸಿಕೊಂಡ.

'ಒಂದ್ ಕೆಲ್ಸ ಮಾಡಾನಾ... ಈ ಹೆಂಗಸು, ಹುಡುಗ ಕೂಸನ್ನ ಎತ್ಕೊಂಡು ಹೋಗ್ತಾ ಇರೋದನ್ನ ಫೋಟೊ ಮಾಡ್ಸಿ ಕೊಡ್ತೀನಿ, ಅದನ್ನು ತೋರಿಸು. ಸಂಜೀ ತನಕಾ ಟೈಂ ತಗಾ... ಆದ್ರೆ ಒಂದ್ ಮಾತು ಹೇಳ್ತೀನಿ. ನಿನ್ಗೆ ಮಗು ಬೇಕು ಅಂದ್ರೆ ದಯ್ವಿಟ್ಟು ಫೋಟೊನ ಪೇಪರು